# “ರೈತರ ಸಾಲ ಮುಕ್ತಿ ಮಸೂದೆ 2017”

**ಕಣ್ಣೋಟ**

ಈ ಮಸೂದೆ ಎರಡೂ ಅಂಶಗಳ ಮೇಲೆ ಒತ್ತು ನೀಡಿದೆ.

1. ಸಾಲಬಾಧೆಗೆ ತತಕ್ಷಣದ ಪರಿಹಾರ, ಅಂದರೆ ಪ್ರಸ್ತುತ ಸಾಲಮನ್ನಾ ಹಾಗೂ
2. ರೈತರ ಋಣಮುಕ್ತಿ ಆಯೋಗ'ದ ಸ್ಥಾಪನೆ ಮೂಲಕ ಭವಿಷ್ಯದಲ್ಲೂ ಸಾಲದ ಸುಳಿಗೆ ಸಿಲುಕದಂತೆ ರೈತರನ್ನು ರಕ್ಷಿಸುವುದು.

ತಕ್ಷಣವೇ ಮಾಡಬೇಕಿರುವ ಸಾಲ ಮನ್ನಾವನ್ನು ನೇರವಾಗಿ ಸರ್ಕಾರವೇ ಜಾರಿಗೊಳಿಸಬೇಕೆ ಹೊರತು, ಆಯೋಗದ ಮೂಲಕ ಅಲ್ಲ. ಬ್ಯಾಂಕ್ ಸಾಲ ಮನ್ನಾ ಅಲ್ಲದೇ ಸಾಂಸ್ಥಿಕೇತರ ಸಾಲದಿಂದ ಮುಕ್ತಿ ಮಾಡುವ ಅವಕಾಶವನ್ನು ಈ ಮಸೂದೆ ಒಳಗೊಂಡಿದೆ. ತಕ್ಷಣವೇ ಮಾಡುವ ಸಾಲ ಮನ್ನಾದಲ್ಲಿ, ಸಾಂಸ್ಥಿಕೇತರ ಸಾಲವನ್ನು, ಸಾಂಸ್ಥಿಕ ಸಾಲವನ್ನಾಗಿ ಪರಿವರ್ತಿಸಲು ಬೇಕಾದ ಸೂಕ್ತ ಕ್ರಮಗಳ ಮೂಲಕ ಸಾಲವಹಿಸಿಕೊಳ್ಳುವ ಪ್ರಕ್ರಿಯೆಗಳನ್ನು ಸರ್ಕಾರವೇ ಜಾರಿಮಾಡುವುದೂ ಕೂಡ ಈ ಮಸೂದೆಯಲ್ಲಿ ಸೇರಿದ್ದು, ಇದಾದ ನಂತರ ಈ ಬ್ಯಾಂಕ್ ಸಾಲಗಳಿಗೆ ಸಾಲಮನ್ನಾ ಸೌಲಭ್ಯವನ್ನು ಒದಗಿಸಲಾಗುವುದು.

ಭವಿಷ್ಯದಲ್ಲಿ ಋಣ ಮುಕ್ತಿ ಆಯೋಗವು, ಅಪತ್ತಿಗೀಡಾದ ಪ್ರದೇಶಗಳನ್ನು ಹಾಗೂ ಅಪತ್ತಿಗೀಡಾದ ಬೆಳೆಗಳನ್ನು ನಿರ್ಣಯಿಸುವ, ಸಾಲಬಾಧೆಯಿಂದ ಮುಕ್ತಿಗೊಳಿಸುವ ಕೆಲವು ಕ್ರಮಗಳಿಗೆ ಮುತುವರ್ಜಿವಹಿಸುವಂತಹ, ಯಾವುದೇ ಹೆಚ್ಚುವರಿ ಬಡ್ಡಿ ಹೊರೆ ಇಲ್ಲದೆ, ಸಾಲವನ್ನು ಪುನರರಚಿಸುವಂತಹ, ನಿರ್ಧಿಷ್ಟ ಸಾಲವನ್ನು ಮನ್ನಾ ಮಾಡುವಂತೆ ಶಿಫಾರಸ್ಸು ಮಾಡುವ, ಸಾಲ ವಹಿಸಿಕೊಳ್ಳುವುದನ್ನು ಕಡ್ಡಾಯಗೊಳಿಸುವಂತಹ ಮತ್ತು ಮೂರು ವರ್ಷಗಳವರೆಗೆ ಸಾಲವನ್ನು ವಸೂಲು ಮಾಡದಂತೆ ತಡೆಯುವ ಸಶಕ್ತವಾದ ಅಧಿಕಾರವನ್ನು ಹೊಂದಿರುವುದು.

ಸಹಕಾರಿ ಬ್ಯಾಂಕ್‌ಗಳು ಹಾಗೂ ಸಾಂಸ್ಥಿಕೇತರ ಸಾಲ ಸೇರಿದಂತೆ ಎಲ್ಲ ಸಾಲ ಮೂಲಗಳಿಂದ ಋಣ ಮುಕ್ತಿಗೊಳಿಸುವ ಪ್ರಕ್ರಿಯೆಗಳನ್ನು ಮಾಡುವಂತಹ ರಾಜ್ಯ ಮಟ್ಟದ ಕೃಷಿ ಸಾಲ ಪರಿಹಾರ ಆಯೋಗವನ್ನು ಸೃಷ್ಟಿಸಲು ಅವಕಾಶ ನೀಡುವ ಕಾಯಿದೆಯನ್ನು ರಾಜ್ಯಗಳು ಅಂಗೀಕರಿಸುವಂತೆ ಮಾದರಿ ಕಾನೂನು ಅನ್ನು ಸಹ ಈ ಮಸೂದೆ ಒದಗಿಸುತ್ತದೆ. ಸಾಲ ಸಂಬಂದಿತ ಕ್ರಿಯೆಗಳನ್ನು ಹಾಗೂ ಆಸ್ತಿ ಜಪ್ತಿ/ಹರಾಜು ಪ್ರಕ್ರಿಯೆಗಳನ್ನು ನಿಯಂತ್ರಿಸುವುದು ಇದರಲ್ಲಿ ಅಡಕವಾಗಿದೆ.

ಭವಿಷ್ಯದಲ್ಲಿ ಸಾಲ ಭಾಧಿತರಾಗುವ ಸಂಭವವನ್ನು ಕುಗ್ಗಿಸಲು, ಪರಿಣಾಮಕಾರಿ ಬೆಳೆ ವಿಮೆ, ವಿಕೋಪ ಪರಿಹಾರ ಹಾಗೂ ವೆಚ್ಚ ತಾಳಿಕೆಯ ಕೃಷಿಗೆ ಸಂಬಂಧಿಸಿದ ಮುಖ್ಯಾಂಶಗಳನ್ನು ಸಹ ಈ ಮಸೂದೆ ಒಳಗೊಂಡಿದೆ.

| |
|---|
| ಸಾಲಬಾಧಿತ ರೈತರಿಗೆ ತಕ್ಷಣವೇ ಸಾಲಮನ್ನಾ ಸೌಲಭ್ಯ ಒದಗಿಸುವ ಮತ್ತು ಆದೇಶಗಳನ್ನು ಹೊರಡಿಸುವ, ಸಾಲಬಾಧಿತ ರೈತರ, ಇದರ ಜೊತೆ ಸಂಭಂದ ಇರುವ ವಿಷಯಗಳು ಹಾಗೂ ಘಟನೆಗಳು ಕುರಿತಂತೆ ಆಹವಾಲು ಆಲಿಸಿ, ಸೂಕ್ತ ಕ್ರಮಗಳನ್ನು ಶಿಫಾರಸ್ಸು ಮಾಡುವ ಅಧಿಕಾರ ಇರುವ ಆಯೋಗದ ಮೂಲಕ ನಿರಂತರವಾಗಿ ಪರಿಹಾರ ಒದಗಿಸುವ ಮಸೂದೆ. |

## ಅಧ್ಯಾಯ - 1 : ಮುಖ್ಯ ವ್ಯಾಖ್ಯಾನಗಳು

'ಕೃಷಿ' ಅಂದರೆ ತೋಟಗಾರಿಕೆ, ಔಷದಿ ಗಿಡಗಳನ್ನು ನೆಡುವುದು ಹಾಗೂ ಬೆಳೆಸುವುದು, ಬೆಳೆಗಳು ಮತ್ತು ಅಂತರ ಬೆಳೆಗಳು, ಹಣ್ಣುಗಳು, ತರಕಾರಿಗಳು, ಹಾಲು ಉತ್ಪಾದನೆ, ಕಿರು ಅರಣ್ಯ ಉತ್ಪನ್ನಗಳ ಸಂಗ್ರಹಣೆ, ಹೂವುಗಳು, ಹುಲ್ಲು, ಮೇವು ಹಾಗೂ ಮರಗಳು ಅಥವಾ ಯಾವುದೇ ರೀತಿಯ ಮಣ್ಣು ವ್ಯವಸಾಯ, ನರ್ಸರಿ ಬೇಸಾಯ, ಮೀನು ಮೃದ್ದಂಗಿ, ಜೇನು, ರೇಷ್ಮೆ ಹುಳು, ಕೋಳಿ, ಬಾತುಕೋಳಿ, ಜಾನುವಾರು ಅಥವಾ ಹಂದಿ ಸಂತಾನೋತ್ಪತ್ತಿ ಹಾಗೂ ಸಾಕಾಣಿಕೆ ಮತ್ತು ಕೃಷಿ ಸಂಬಂಧಿತ ಚಟುವಟಿಕೆಗಳಿಗೆ ಅಥವಾ ಮತ್ಯಾವುದೇ ವ್ಯವಸಾಯದ ಉದ್ದೇಶಗಳಿಗೆ ಭೂಮಿ ಬಳಕೆ.

'ರೈತ' ಅಂದರೆ ಬೆಳೆಗಳನ್ನು ಬೆಳೆಯುವ ಆರ್ಥಿಕ ಹಾಗೂ/ಅಥವಾ ಜೀವನಾವಶ್ಯಕ ಚಟುವಟುಕೆಗಳಲ್ಲಿ ಸಕ್ರೀಯವಾಗಿ ತೊಡಗಿಸಿಕೊಂಡಿರುವ ವ್ಯಕ್ತಿ ಅಥವಾ ಭೂಮಿ ಮಾಲೀಕತ್ವ ಇದ್ದು ಅಥವಾ ಇಲ್ಲದೇ ಇತರೆ ಪ್ರಾಥಮಿಕ ಕೃಷಿ ಸರಕುಗಳನ್ನು ಉತ್ಪಾದಿಸುವವ ಹಾಗೂ ಕೃಷಿಕರು, ಕೃಷಿ ಕೂಲಿಕಾರರು, ಪಾಲು ಬೆಳೆಗಾರರು, ಗೇಣಿದಾರರು, ಕೋಳಿ ಹಾಗೂ ಜಾನುವಾರು ಸಾಕಾಣಿಕೆದಾರರು, ಮೀನುಗಾರರು, ಜೇನು ಸಾಕಾಣಿಕೆದಾರರು, ಕುರಿ ಮತ್ತಿತರೆ ಜಾನುವಾರು ಮೆಯಿಸುವವರು, ಕಾರ್ಪೊರೇಟ್‌ಯೇತರ ಪ್ಲಾಂಟರ್‌ಗಳು ಮತ್ತು ತೋಟಗಾರಿಕಾ ಕಾರ್ಮಿಕರು, ಅರಣ್ಯ ಉತ್ಪನ್ನಗಳ ಸಂಗ್ರಾಹಕರು ಸೇರಿದಂತೆ ಎಲ್ಲ ಕೃಷಿ ಕಾಯಕದ ಭಾಗೀದಾರರು. ಸಾಮೂಹಿಕ ಮಾಲೀಕತ್ವದಲ್ಲಿ ಭೂಮಿ ಹೊಂದಿ ಅಥವಾ ಭೂಮಿ ಗುತ್ತಿಗೆ ಪಡೆದು ಬೇಸಾಯ ನಿರತ ಸ್ವ–ಸಹಾಯ ಗುಂಪುಗಳು ಕೂಡ ಒಳಗೊಂಡಂತೆ.

'ಸಾಲ' ಅಂದರೆ ಯಾವುದೇ ಹೊಣೆಗಾರಿಕೆ, ಅಡಮಾನ ಅಥವಾ ಅಡಮಾನ ರಹಿತ, ಈ ಕಾನೂನು ಆರಂಭವಾದ ದಿನಕ್ಕೆ ಅಥವಾ ಇದಕ್ಕೂ ಮುಂಚೆ ರೈತ ನೀಡಬೇಕಿರುವ ಯಾವುದೇ ಬಾಕಿ ಅಥವಾ ರಾಜ್ಯದಲ್ಲಿನ ಯಾವುದೇ ನಿರ್ದಿಷ್ಟ ಅಪತ್ತಿಗೀಡಾದ ಪ್ರದೇಶಕ್ಕೆ ಸಂಬಂಧಿಸಿ, ಗೆಜೆಟ್ ಪ್ರಕಟಣೆ ಮೂಲಕ ಸರ್ಕಾರ ಗೊತ್ತುಪಡಿಸಬಹುದಾದ ದಿನಾಂಕದಂದು ಅಥವಾ ಇದಕ್ಕೂ ಮೊದಲು ಅವನ/ಅವಳ ಆದಾಯಕ್ಕೆ ಮೀರಿ ಒಪ್ಪಂದದಂತೆ ಅಥವಾ ಡಿಕ್ರಿ ಮೂಲಕ ಅಥವಾ ಯಾವುದೇ ನ್ಯಾಯಾಲಯ ಅಥವಾ ನ್ಯಾಯಮಂಡಳಿ ಅಥವಾ ಇನ್ಯಾವುದೇ ಸಾಂಸ್ಥಿಕ ಸಾಲಗಾರ ಅಥವಾ ಖಾಸಗಿ ಸಾಲಗಾರನಿಗೆ ಪಾವತಿಸುವಂತಹದ್ದು. ಆದರೆ ಕೃಷಿ ಸಂಬಂಧಿತ ವಾಣೀಜ್ಯ ಉದ್ದೇಶಗಳಿಗೆ ಹೊರತಾದ ವಾಣೀಜ್ಯ ಅಥವಾ ಐಷಾರಾಮಿ ಉದ್ದೇಶಗಳಿಗಾಗಿ ರೈತ ಪಡೆದ ಸಾಲವನ್ನು ಹೊರತುಪಡಿಸಿ.

## ಅಧ್ಯಾಯ – 2 : ತತಕ್ಷಣದ ಸಾಲ ಪರಿಹಾರ

- ➔ ಪ್ರತಿಯೊಬ್ಬ ರೈತನು, 20 ನವೆಂಬರ್ 2017 ಕ್ಕೆ ಅನ್ವಯವಾಗುವಂತೆ ಇರುವ ಸುಸ್ತಿಯಾಗಿರುವ ಎಲ್ಲ ಸಾಂಸ್ಥಿಕ ಸಾಲವನ್ನು ಷರತ್ತು ರಹಿತವಾಗಿ ತತಕ್ಷಣವೇ ಮನ್ನಾ ಮಾಡಿಸಿಕೊಳ್ಳಲು ಅರ್ಹನಾಗಿರುತ್ತಾನೆ.
- ➔ ಒಂದೇ ಕಂತಿನಲ್ಲಿ ಸಾಲಮನ್ನಾ ಸೌಲಭ್ಯವನ್ನು ಜಾರಿ ಮಾಡಲಾಗುವುದು. ಸಾಲಮನ್ನಾ ಜಾರಿ ಪ್ರಭಾವಳಿಯಿಂದ ಪ್ರೇರಿತವಾಗದೇ ಮುಂದಿನ ಅವಧಿಯಲ್ಲಿ ಎಲ್ಲ ರೈತರಿಗೂ ಹೊಸ ಸೌಲಭ್ಯ ಒದಗಿಸಲಾಗುವುದು.
- ➔ ಸಾಂಸ್ಥಿಕೇತರ ಸಾಲವನ್ನು ಸಾಂಸ್ಥಿಕ ಸಾಲವನ್ನಾಗಿ ಪರಿವರ್ತಿಸಲು ಸಾಲ ವಹಿಸಿಕೊಳ್ಳುವ ಯೋಜನೆಯನ್ನು ಸರ್ಕಾರವು ಜಾರಿ ಮಾಡುವುದು.
- ➔ ಸಾಲ ವರ್ಗಾವಣೆ ಪೂರ್ಣಗೊಳ್ಳುತ್ತಿದ್ದಂತೆ, ತತ್ಪರಿನಾಮದ ಸಾಂಸ್ಥಿಕ ಸಾಲಕ್ಕೆ, ಸರ್ಕಾರವು ಸಾಲಮನ್ನಾ ಸೌಲಭ್ಯ ಒದಗಿಸುವುದು.

➔ ಈ ಮೊದಲ ಹಣಕಾಸು ವರ್ಷದಿಂದ ನಿಗದಿ ಪಡಿಸಿದ ದಿನಾಂಕದವರೆಗೆ ಸಾಂಸ್ಥಿಕ ಸಾಲವನ್ನು ಮರುಪಾವತಿ ಮಾಡಿರುವ ರೈತರ ಬ್ಯಾಂಕ್ ಖಾತೆಗೆ, ಅವರು ಬೆಳೆದ ಬೆಳೆಗೆ ನಿಗದಿ ಪಡಿಸಲಾದ ಸಾಲ ಪ್ರಮಾಣದ ಮೊತ್ತವನ್ನು ಜಮೆ ಮಾಡಲಾಗುವುದು.

## ಅಧ್ಯಾಯ - 3 : ರೈತರ ಋಣ ಮುಕ್ತಿ ಆಯೋಗ

❖ ನಿವೃತ್ತ ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶರನ್ನು ಅಧ್ಯಕ್ಷರನ್ನಾಗಿ ಹೊಂದಿರುವ ರಾಷ್ಟ್ರೀಯ ರೈತರ ಋಣ ಮುಕ್ತಿ ಆಯೋಗವು ನ್ಯಾಯಾಂಗ – 2, ರೈತ ಪ್ರತಿನಿಧಿತ್ವ –4, ತಜ್ಞರು – 2 ಹಾಗೂ ಆರ್ಥಿಕ/ಸಹಕಾರಿ ವಲಯದಿಂದ – 1 ಸೇರಿ ಒಟ್ಟು 9 ಸದಸ್ಯರನ್ನು ಹೊಂದಿರುತ್ತದೆ. ಈ ಆಯೋಗದ ಅವಧಿ 5 ವರ್ಷಗಳಾಗಿದ್ದು, ಆ ನಂತರ ವಿಸ್ತರಣಾರ್ಹ.

❖ ಕಾಯಿದೆ ಜಾರಿ ಸಂಬಂಧ ರೈತರ ಆಹವಾಲನ್ನು ಇದು ಸ್ವೀಕರಿಸಿ, ಪ್ರಕರಣದ ಇತ್ಯರ್ಥಕ್ಕೆ ಆದೇಶಗಳನ್ನು ಹೊರಡಿಸುವ ಹಾಗೂ ಸರ್ಕಾರ ಅನುಸರಿಸಬೇಕಿರುವ ಕ್ರಮಗಳನ್ನು ನಿರ್ದಿಷ್ಟಪಡಿಸಲಿದೆ.

❖ ಭವಿಷ್ಯದ ವರ್ಷಗಳಲ್ಲಿ ಆಯೋಗವು, ನಿರ್ಧಿಷ್ಠ ಜಿಲ್ಲೆ ಅಥವಾ ಜಿಲ್ಲೆಯೊಂದರ ನಿರ್ಧಿಷ್ಟ ಪ್ರದೇಶವನ್ನು ಅಪತ್ತಿಗೀಡಾದ ಪ್ರದೇಶವೆಂದು ಅಥವಾ ನಿರ್ದಿಷ್ಟ ಬೆಳೆಯನ್ನು ಅಪತ್ತಿಗೀಡಾದ ಬೆಳೆಯೆಂದು ಘೋಷಿಸಬಹುದಾಗಿದೆ. ಆಯೋಗವು, ತಾವು ಬಯಸುವ ಅರ್ಹ ತಜ್ಞರಿಂದ ಸೂಕ್ತ ವಿಚಾರಣೆ ನಂತರ ಸ್ವಯಂಪ್ರೇರಿತವಾಗಿ ಅಥವಾ ಅರ್ಜಿಮೇರೆಗೆ, ಇಂತಹ ಘೋಷಣೆಯನ್ನು ಹೊರಡಿಸಬಹುದು.

❖ ಅಪತ್ತಿಗೀಡಾದ ಪ್ರದೇಶಗಳು ಹಾಗೂ ಬೆಳೆಗಳೆಂದು ಘೋಷಿಸಲಾದ ಕಡೆ, ಆಯೋಗವು ಸಂಕಷ್ಟಕ್ಕೀಡಾದ ರೈತರು ಬ್ಯಾಂಕಿನಿಂದ ಹಾಗೂ ಸಾಂಸ್ಥಿಕೇತರ ಮೂಲಗಳಿಮದ ಪೂರ್ಣಸಾಲ ಅಥವಾ ಅಂಶಿಕ ಸಾಲಕ್ಕೆ ಸಾಲ ಮನ್ನಾ ಒದಗಿಸುವಂತೆ ಸರ್ಕಾರಕ್ಕೆ ಶಿಫಾರಸ್ಸು ಮಾಡಲಿದೆ.

❖ ಅಪತ್ತಿಗೀಡಾದ ಪ್ರದೇಶಗಳು ಹಾಗೂ ಬೆಳೆಗಳೆಂದು ಘೋಷಿಸಲಾದ ಕಡೆಗಳಲ್ಲಿ ಆಯೋಗವು

ಅ) ಅಲ್ಪಾವಧಿ ಸಾಲವನ್ನು ಮಧ್ಯಮಾವಧಿ ಸಾಲವನ್ನಾಗಿ, ಮಧ್ಯಮಾವಧಿ ಸಾಲವನ್ನು ಧೀರ್ಘವಧಿ ಯಾಗಿ ಪರಿವರ್ತಿಸುವಂತೆ.

ಆ) ನಿರ್ಧಿಷ್ಟ ಸಾಲವನ್ನು ಮನ್ನಾ ಮಾಡುವಂತೆ ಶಿಫಾರಸ್ಸನ್ನು.

ಇ) ಸಾಲ ಪಡೆದ ರೈತರು ಸಿದ್ದರಿದ್ದರೆ, ಏಕಕಂತಿನ ಸಾಲ ತೀರುವಳಿ ಸೌಲಭ್ಯ ಒದಗಿಸುವ.

ಈ) ಪ್ರಕರಣಾವಾರು ದಂಡ ಬಡ್ಡಿ ಅಥವಾ ಪೂರ್ತಿ ಬಡ್ಡಿಯನ್ನು ಮನ್ನಾ ಮಾಡುವಂತೆ ಆದೇಶಗಳನ್ನು ಹೊರಡಿಸಬಹುದಾಗಿದೆ.

❖ ರೈತರ ಸಾಲದ ವಿಷಯವನ್ನು ಪರಿಗಣಿಸಲು ಅಪತ್ತಿಗೀಡಾದ ಪ್ರದೇಶಗಳಲ್ಲಿ ಸಣ್ಣ ಪೀಠವಾಗಿ ಆಯೋಗವು ತನ್ನ ಕಲಾಪಗಳನ್ನು ನಡೆಸಲಿದೆ.

❖ ಸಾಂಸ್ಥಿಕೇತರ ಮೂಲಗಳಿಂದ ಪಡೆದ ಸಾಲದ ಪ್ರಕರಣಗಳಲ್ಲಿ ಆಯೋಗವು

ಅ) ನ್ಯಾಯೋಚಿತ ಬಡ್ಡಿದರವನ್ನು ನಿಗದಿಪಡಿಸುವ; ಬಡ್ಡಿಯನ್ನು ಸಹ, ಆಯೋಗ ಆದೇಶ ಮಾಡಿದ ರೀತಿಯಲ್ಲಿ ಸರ್ಕಾರವೇ ಭರಿಸುವಂತೆ.

ಆ) ಮೂರು ವರ್ಷಗಳ ಅವಧಿ ಮೀರದಂತೆ ಬೆಳೆನಷ್ಟದ ಸ್ವರೂಪವನ್ನು ಪರಿಗಣಿಸಿ ರೈತರ ಎಲ್ಲಾ ಸಾಲವನ್ನು ಮರುಪಾವತಿಸುವ ಒತ್ತಡ ಬಾರದಂತೆ ನೋಡಿಕೊಳ್ಳುವ.

ಇ) ಸಾಂಸ್ಥಿಕೇತರ ಸಾಲವನ್ನು ಸಾಂಸ್ಥಿಕ ಸಾಲ ಮನ್ನಾಗೆ ಪರಿವರ್ತಿಸಲು ಸಾಲ ವರ್ಗಾವಣೆ ಒದಗಿಸುವಂತೆ ಆದೇಶಗಳನ್ನು ಮಾಡಬಹುದು.

- ❖ ವಾಣೀಜ್ಯ ಬ್ಯಾಂಕ್‌ಗಳ ಜೊತೆ ಸಾಲ ಸಂಬಂಧಿ ನೊಂದ ರೈತನಿಂದ ಆಯೋಗವು ಅರ್ಜಿ ಸ್ವೀಕರಿಸಿ ರೈತನಿಗೆ ಪರಿಹಾರ ಒದಗಿಸುವಂತೆ ಆದೇಶಗಳನ್ನು ಹೊರಡಿಸಬಹುದು.
- ❖ ಆಪತ್ತಿಗೀಡಾದ ಪ್ರದೇಶ ಅಥವಾ ಬೆಳೆ ಎಂದು ಘೋಷಿಸಲಾದ ಸಂದರ್ಭದಲ್ಲಿ ರೈತನ ವಿರುದ್ಧವಾಗಿ ಸಾಲ ವಸೂಲಾತಿ ಪ್ರಕರಣಗಳನ್ನು ದಾಖಲಿಸುವಂತಿಲ್ಲ.
- ❖ ಯಾವುದೇ ಸಾಲ ವಸೂಲಾತಿ ಸಂಬಂಧಿತ ಅಥವಾ ಹೆಸರಿಸುವುದು ಹಾಗೂ ಸಾಲಗಾರ – ರೈತನನ್ನು ಅಪಮಾನಿಸುವುದು, ಕ್ರಮಗಳನ್ನು ತಡೆಯುವ ಅಧಿಕಾರವು ಆಯೋಗಕ್ಕಿರಲಿದೆ.
- ❖ ರೈತ, ಅಸಲನ್ನು ಹಾಗೂ ಅಸಲಿಗೆ ಸರಿಸಮನಾದ ಮೊತ್ತವನ್ನು (ಬಡ್ಡಿ ಪಾವತಿಸಲು) ಮರು ಪಾವತಿಸಿದ್ದರೆ ಆಗ ಸಾಲ ತೀರುವಳಿ ಆಗಿದೆ ಎಂದು ತಿಳಿದು ತೀರುವಳಿ ಮುಕ್ತಾಯಗೊಳಿಸಲು ಆಯೋಗವು ಪ್ರಕಟ ಮಾಡಲಿದೆ.
- ❖ ಆಯೋಗದ ಆದೇಶ/ತೀರ್ಪಿನ ಪ್ರಕಾರ ಮನ್ನಾ ಮಾಡಲಾದ ಸಾಲ ಅಥವಾ ಬಡ್ಡಿಯನ್ನು ಅಥವಾ ಏಕಕಂತಿನ ಸಾಲ ಅಥವಾ ಸಾಲ ಪುನರ್ರಚನೆ ಸಂಬಂದ ಮತ್ಯಾವುದೇ ಪರಿಣಾಮಗಳನ್ನು ಸರ್ಕಾರವೇ ವಹಿಸಿಕೊಳ್ಳಲಿದೆ.

## ಅಧ್ಯಾಯ – 4 : ಕೇಂದ್ರ ಸರ್ಕಾರದ ಭಾದ್ಯತೆಗಳು

- ❖ ಕೇಂದ್ರ ಸರ್ಕಾರವು ತತಕ್ಷಣದ ಸಾಲ ಪರಿಹಾರ ಹಾಗೂ ಋಣ ಮುಕ್ತಿ ಆಯೋಗದ ತೀರ್ಪು, ಆದೇಶಗಳನ್ನು ಜಾರಿ ಮಾಡಲು ಅಗತ್ಯ ಹಣಕಾಸು ವೆಚ್ಚವನ್ನು ಒದಗಿಸಲಿದೆ.
- ❖ ನಿರ್ದಿಷ್ಟ ವಿಧದ ಆಸ್ತಿಗಳನ್ನು ಸಾಲದಾತರು ಜಪ್ತಿ ಅಥವಾ ಹರಾಜು ಕ್ರಿಯೆ ನಡೆಸದಂತೆ ವಿನಾಯ್ತಿ ನೀಡುವ ಪ್ರಕಟಣೆಯನ್ನು ಸರ್ಕಾರ ಹೊರಡಿಸಲಿದೆ.
- ❖ ಸಹಕಾರಿ ಬ್ಯಾಂಕ್‌ಗಳು ಮತ್ತು ಸಾಂಸ್ಥಿಕೇತರ ಸಾಲದಾತರೂ ಸೇರಿದಂತೆ ಎಲ್ಲಾ ಸಾಲ ಪರಿಹಾರ ಸಂಬಂಧಿತ ವಿಷಯಗಳನ್ನು ಕೈಗೆತ್ತಿಕೊಳ್ಳಲು “ರಾಜ್ಯ ಮಟ್ಟದ ರೈತ ಸಾಲ ಪರಿಹಾರ ಆಯೋಗ” ವನ್ನು ಸ್ಥಾಪಿಸಲು ರಾಜ್ಯ ಸರ್ಕಾರಗಳು ಅಂಗೀಕರಿಸಲು ಮಾದರಿ ಕಾನೂನು ಅನ್ನು ಕೇಂದ್ರ ಸರ್ಕಾರ ರೂಪಿಸಲಿದೆ.
- ❖ ಅಪತ್ತಿನ ಅವಧಿಗಳ/ವರ್ಷಗಳಲ್ಲಿ ರೈತರು ಸಾಲದ ಸುಳಿಗೆ ಸಿಲುಕದಂತೆ ಖಾತರಿಪಡಿಸುವ ಸಮರ್ಪಕ ಹಾಗೂ ಪರಿಣಾಮಕಾರಿ ವಿಕೋಪ ಪರಿಹಾರ ಮತ್ತು ಬೆಳೆ ವಿಮೆ ಯೋಜನೆಗಳನ್ನು ಕೇಂದ್ರ ಸರ್ಕಾರ ಜಾರಿ ಮಾಡಲಿದೆ.
- ❖ ಸರ್ಕಾರವು, ಸಾಲಬಾಧಿತ್ವವನ್ನು ಕುಗ್ಗಿಸಲು ಕಡಿಮೆ ವೆಚ್ಚದ ಪರಿಸರ ಸ್ನೇಹಿ ಕೃಷಿಯನ್ನು ದೊಡ್ಡ ಪ್ರಮಾಣದಲ್ಲಿ ಪ್ರೊತ್ಸಾಹಿಸಲಿದೆ.
- ❖ ಸರ್ಕಾರವು, ಕಡೆಗಣಿಸಲ್ಪಟ್ಟ ಹಾಗೂ ನೈಜ ಕೃಷಿಕರನ್ನು ಸಾಂಸ್ಥಿಕ ಸಾಲ ವ್ಯಾಪ್ತಿಯೊಳಗೆ ತರುವುದನ್ನು ಖಾತರಿಪಡಿಸಲು, ಅದ್ಯತಾ ಸಾಲ ವಲಯದ ನಿಯಾಮವಳಿಗಳನ್ನು ಸುಧಾರಿಸಲಿದೆ.